## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1309** |
| ವಿಧಾನ ಪರಿಷತ್ತು ಸದಸ್ಯರ ಹೆಸರು | : | ಶ್ರೀ ಎನ್ ರವಿಕುಮಾರ್ (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | **16.03.2026** |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರದ ವತಿಯಿಂದ ಹಲಾಲ್ ಪ್ರಮಾಣ ಪತ್ರವನ್ನು ನೀಡಲಾಗುತ್ತಿದೆಯೇ; ಇಲ್ಲವಾದಲ್ಲಿ ಆಹಾರ ಪೊಟ್ಟಣಗಳ ಮೇಲೆ ಹಲಾಲ್ ಪ್ರಮಾಣ ಪತ್ರವನ್ನು ಅಚ್ಚು ಹಾಕಲು ಯಾವ ನಿಯಮದ ಅನ್ವಯ ಅನುಮತಿ ನೀಡಲಾಗಿದೆ; ಈ ಕುರಿತು ಸರ್ಕಾರದ ನಿಲುವೇನು; | ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ವತಿಯಿಂದ ಯಾವುದೇ ರೀತಿಯ ಹಲಾಲ್ ಪ್ರಮಾಣ ಪತ್ರವನ್ನು ನೀಡುತ್ತಿರುವುದಿಲ್ಲ.<br>ರಾಜ್ಯ ವ್ಯಾಪ್ತಿಯ ಆದ್ಯತಾ ಪಡಿತರ ಚೀಟಿಯ (ಬಿಪಿಎಲ್) ಪ್ರತಿ ಸದಸ್ಯರಿಗೆ ರಾಜ್ಯ NFSA ಅಡಿ ಪ್ರತಿ ಮಾಹೆ 5 ಕೆ.ಜಿ ಆಹಾರಧಾನ್ಯವನ್ನು ಹಂಚಿಕೆ ಮಾಡಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಅನ್ನಭಾಗ್ಯ ಯೋಜನೆಯಡಿ ಪ್ರತಿ ಅರ್ಹ ಫಲಾನುಭವಿಗೆ 05 ಕೆ.ಜಿ ಹೆಚ್ಚುವರಿ ಅಕ್ಕಿಯನ್ನು ವಿತರಿಸಲಾಗುತ್ತಿದೆ.<br>ಹಲಾಲ್ ವಿಷಯವು ಆಹಾರ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಗೆ ಒಳಪಡುವುದಿಲ್ಲ. |
| ಆ | ಹಲಾಲ್ ಪ್ರಮಾಣ ಪತ್ರಗಳನ್ನು ಯಾವ ಸಂಸ್ಥೆಯವರು ನೀಡುತ್ತಿದ್ದಾರೆ; ರಾಜ್ಯ ಸರ್ಕಾರವು ಸದರಿ ಸಂಸ್ಥೆಯವರಿಗೆ ಹಲಾಲ್ ಪ್ರಮಾಣ ಪತ್ರ ನೀಡುವ ಅಧಿಕೃತ ಸಂಸ್ಥೆ ಎಂಬುದಾಗಿ ಅನುಮತಿ ನೀಡಿದೆಯೇ; ಇಲ್ಲವಾದಲ್ಲಿ ಯಾರ ಅನುಮತಿಯನ್ನು ಪಡೆದು ಈ ಪ್ರಮಾಣ ಪತ್ರವನ್ನು ನೀಡಲಾಗುತ್ತದೆ; ಇದರಿಂದ ಸರ್ಕಾರಕ್ಕೆ ಎಷ್ಟು ಪ್ರಮಾಣದ ಶುಲ್ಕ ಸಂದಾಯವಾಗುತ್ತಿದೆ; | ಅನ್ವಯಿಸುವುದಿಲ್ಲ. |

| | | |
|---|---|---|
| ಇ | ಹಲಾಲ್ ಪ್ರಮಾಣ ಪತ್ರ ನೀಡುವ ಸಂಸ್ಥೆಯವರು ಈ ಪ್ರಮಾಣ ಪತ್ರವನ್ನು ನೀಡಲು ಸಂಗ್ರಹಿಸುವ ಶುಲ್ಕದ ಮೇಲೆ ಸರ್ಕಾರವು ಎಷ್ಟು ಪ್ರಮಾಣದ ಸೇವಾ ತೆರಿಗೆ, ಮಾರಾಟ ತೆರಿಗೆ ಹಾಗೂ ಇತರ ತೆರಿಗೆಗಳನ್ನು ವಿಧಿಸುತ್ತಿದೆ; | ಅನ್ವಯಿಸುವುದಿಲ್ಲ |
| ಈ | ಹಲಾಲ್ ಪ್ರಮಾಣ ಪತ್ರವನ್ನು ಆಹಾರ ಪದಾರ್ಥಗಳ ಮೇಲೆ ವ್ಯಾಪಾರ ಉದ್ದೇಶಗಳಿಗಾಗಿ ಬಳಸಿದಾಗ ಸದರಿ ಆಹಾರ ಪದಾರ್ಥಗಳ ಶುದ್ಧತೆಯನ್ನು ಯಾವ ಸರ್ಕಾರಿ ಸಂಸ್ಥೆಯವರು ಪ್ರಮಾಣೀಕರಿಸುತ್ತಾರೆ; (ವಿವರ ನೀಡುವುದು); | ಅನ್ವಯಿಸುವುದಿಲ್ಲ |
| ಉ | ರಾಜ್ಯದ ಬಹುಸಂಖ್ಯಾತರು ಹಲಾಲ್ ಪ್ರಮಾಣ ರಹಿತ ಆಹಾರ ಪದಾರ್ಥಗಳನ್ನು ಸೇವಿಸುವ ಒಲವುಳ್ಳವರಾಗಿದ್ದು ಅಂತಹ ಜನರಿಗಾಗಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ವಿವರ ನೀಡುವುದು); | ಅನ್ವಯಿಸುವುದಿಲ್ಲ |

ಇ- ಆನಾಸ 33 ಆರ್‌ಪಿಆರ್ 2026

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ
ಇಲಾಖಾ ಸಚಿವರು